# ಕರ್ನಾಟಕ ಸರ್ಕಾರದ ನಡವಳಿ

**ವಿಷಯ:** ಶ್ರೀ ಚಾಂದ್ ಪಾಷಾ, ಅಧ್ಯಕ್ಷರು, ಗೋಗಿಪೇಠ ಗ್ರಾಮ ಪಂಚಾಯಿತಿ, ಶಹಾಪೂರ ತಾಲ್ಲೂಕು, ಯಾದಗಿರಿ ಜಿಲ್ಲೆ, ಇವರ ವಿರುದ್ಧ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993 ರ ಪ್ರಕರಣ 43–ಎ ರನ್ವಯ ಕ್ರಮ ಕೈಗೊಳ್ಳುವ ಬಗ್ಗೆ.

**ಓದಲಾಗಿದೆ:**

1. ಲೋಕಾಯುಕ್ತರ ಪತ್ರ ಸಂಖ್ಯೆ ಉಪಲೋಕ್/ಜಿಎಲ್‌ಬಿ–856/2014/ಡಿಆರ್‌ಇ–3 ದಿನಾಂಕ:08–09–2016
2. ಸರ್ಕಾರದ ಪತ್ರ ಸಂಖ್ಯೆ: ಸಂ.ಗ್ರಾಅಪ:817:ಗ್ರಾಪಂಅ:2016, ದಿನಾಂಕ:10.11.2016, ರ ಕಾರಣ ಕೇಳುವ ನೋಟಿಸ್ಸು.
3. ಶ್ರೀ ಚಾಂದ್ ಪಾಷಾ, ಅಧ್ಯಕ್ಷರು, ಗೋಗಿಪೇಠ ಗ್ರಾಮ ಪಂಚಾಯಿತಿ, ಶಹಾಪೂರ ತಾಲ್ಲೂಕು, ಯಾದಗಿರಿ ಜಿಲ್ಲೆ, ಇವರು ಕಾರಣ ಕೇಳುವ ನೋಟಿಸ್‌ಗೆ ನೀಡಿರುವ ಲಿಖಿತ ಹೇಳಿಕೆ ದಿನಾಂಕ: 06.02.2017.

**ಪ್ರಸ್ತಾವನೆ :**

ಮೇಲೆ ಓದಲಾದ ಕ್ರಮ ಸಂಖ್ಯೆ: (1) ರಲ್ಲಿ ಮಾನ್ಯ ಉಪಲೋಕಾಯುಕ್ತರು, ದಿನಾಂಕ:–08–09–2016 ರಂದು ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(3) ರ ಅನ್ವಯ ಸಲ್ಲಿಸಿರುವ ವರದಿಯಲ್ಲಿ ಶ್ರೀ ಚಾಂದ್ ಪಾಷಾ, ಅಧ್ಯಕ್ಷರು, ಗೋಗಿಪೇಠ ಗ್ರಾಮ ಪಂಚಾಯಿತಿ, ಶಹಾಪೂರ ತಾಲ್ಲೂಕು, ಯಾದಗಿರಿ ಜಿಲ್ಲೆ, ರವರ ಕುರಿತು ತಮ್ಮ ಶಿಫಾರಸ್ಸಿನಲ್ಲಿ ಈ ಕೆಳಕಂಡಂತೆ ತಿಳಿಸಿರುತ್ತಾರೆ.

ಸದರಿಯವರು ಅಧ್ಯಕ್ಷರಾಗಿದ್ದಾಗ ಶ್ರೀಮತಿ ಭವಾನಿ ಗಂಡ ರಾಘವೇಂದ್ರ ಹಡಪದ, ಗ್ರಾಮ ಪಂಚಾಯಿತಿ ಸದಸ್ಯರು, ಗೋಗಿಪೇಠ ಇವರು ತಮ್ಮ ಸ್ಥಾನವನ್ನು ದುರುಪಯೋಗ ಪಡಿಸಿಕೊಂಡು ಇಂದಿರಾ ಆವಾಸ್ ಯೋಜನೆಯಡಿ ಫಲಾನುಭವಿಯಾಗಿ ಮನೆಯನ್ನು ನಿರ್ಮಿಸದೇ ರೂ.40,000/– ಗಳ ಹಣವನ್ನು ಪಡೆದಿರುತ್ತಾರೆ. ಈ ಸಂಬಂಧ ಸದರಿಯವರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲಾಗಿರುತ್ತದೆ. ಇದರಿಂದಾಗಿ ಭೀತರಾದ ಶ್ರೀಮತಿ ಭವಾನಿ, ಇವರು ದಿನಾಂಕ:19.04.2011 ರಂದು ಗ್ರಾಮ ಪಂಚಾಯಿತಿ ಸದಸ್ಯ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿರುತ್ತಾರೆ.

ಶ್ರೀ ಚಾಂದ್ ಪಾಷಾ, ಅಧ್ಯಕ್ಷರು, ಗೋಗಿಪೇಠ ಗ್ರಾಮ ಪಂಚಾಯಿತಿ, ಇವರು ರಾಜೀನಾಮೆಯನ್ನು ಸ್ವೀಕರಿಸಿರುತ್ತಾರೆ. ತಹಶೀಲ್ದಾರರು ದಿನಾಂಕ:18.05.2011 ರಂದು ಪತ್ರ ಬರೆದು ರಾಜೀನಾಮೆ ಅಂಗೀಕರಿಸಿರುವ ಬಗ್ಗೆ ಸ್ಪಷ್ಟೀಕರಣ ಕೋರಿರುತ್ತಾರೆ. ಈ ಹಿನ್ನಲೆಯಲ್ಲಿ ಶ್ರೀ ಚಾಂದ್ ಪಾಷಾ, ಅಧ್ಯಕ್ಷರು, ಇವರು ದಿನಾಂಕ:28.06.2011 ರಂದು ನಡೆದ ಸಾಮಾನ್ಯ ಸಭೆಯಲ್ಲಿ ರಾಜೀನಾಮೆಯನ್ನು ಮಂಡಿಸಿರುತ್ತಾರೆ. ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993 ರ ಅಧಿನಿಯಮ 43 ರನ್ವಯ ಶ್ರೀಮತಿ ಭವಾನಿ, ಇವರು ರಾಜೀನಾಮೆಯನ್ನು ಅಂಗೀಕರಿಸಲು ತಿರಸ್ಕರಿಸಿ ನಿರ್ಣಯ ಪಾಸು ಮಾಡಿರುತ್ತಾರೆ. ಅಲ್ಲದೇ ಶ್ರೀಮತಿ ಭವಾನಿ ಇವರಿಗೆ ದಿನಾಂಕ:20.10.2011 ರಂದು ನಡೆದ ಅಧ್ಯಕ್ಷರ ಚುನಾವಣೆ ಮತ್ತು ದಿನಾಂಕ:17.02.2012 ರಂದು ನಡೆದ ಸಾಮಾನ್ಯ ಸಭೆಯಲ್ಲಿ ಭಾಗವಹಿಸಲು ಅವಕಾಶ ಕಲ್ಪಿಸಲಾಗಿರುತ್ತದೆ.

ಈ ಸಂಬಂಧ ಗ್ರಾಮ ಪಂಚಾಯಿತಿಯನ್ನು ವಿಸರ್ಜಿಸುವಂತೆ ಶ್ರೀ ಮಾನಪ್ಪ ಇವರು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್ ಯಾದಗಿರಿ, ಇವರಿಗೆ ಸಲ್ಲಿಸಿದ ದೂರಿನಂತೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಯಾದಗಿರಿ ಜಿಲ್ಲೆ, ಇವರು ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮದ ನಿಯಮ 237(1) ರನ್ವಯ ಕ್ರಮ ಕೈಗೊಳ್ಳುವಂತೆ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತ್ ಶಹಾಪೂರ, ಇವರಿಗೆ ಸೂಚಿಸಿರುತ್ತಾರೆ.

ದಿನಾಂಕ:28.06.2011 ರ ಗ್ರಾಮ ಪಂಚಾಯಿತಿಯ ನಿರ್ಣಯವನ್ನು ತಾಲ್ಲೂಕು ಪಂಚಾಯಿತಿಯು ದಿನಾಂಕ:06.09.2012 ರಂದು ರದ್ದು ಪಡಿಸಿರುತ್ತದೆ. ಈ ಮೂಲಕ ಶ್ರೀ ಚಾಂದ್ ಪಾಷಾ, ಅಧ್ಯಕ್ಷರು, ಇವರು ತಮ್ಮ ಕರ್ತವ್ಯ ನಿರ್ವಹಣೆಯಲ್ಲಿ ವಿಫಲರಾಗಿರುತ್ತಾರೆಂದು ದೂರುದಾರರಾದ ಶ್ರೀ ಮಾನಪ್ಪ ತಂದೆ ಚಂದ್ರಾಮಪ್ಪ ಹಡಪದ, ಮನೆ ನಂ.3–35, ಗೋಗಿಪೇಠ, ಶಹಾಪೂರ ತಾಲ್ಲೂಕು, ಯಾದಗಿರಿ ಜಿಲ್ಲೆ, ಇವರು ಸಲ್ಲಿಸಿದ ದೂರಿ

ನಂತೆ ನಡೆಸಿದ ತನಿಖೆ ಅನುಸಾರ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993 ರ ನಿಯಮ 43 ಈ ಕೆಳಕಂಡಂತಿರುತ್ತದೆ. "ಗ್ರಾಮ ಪಂಚಾಯಿತಿಯ ಸದಸ್ಯನು ತನ್ನ ಸದಸ್ಯತ್ವಕ್ಕೆ ತನ್ನ ಸಹಿ ಸಹಿತ ಅಧ್ಯಕ್ಷರಿಗೆ ಬರಹದಲ್ಲಿ ಬರೆದು ರಾಜೀನಾಮೆ ಕೊಡಬಹುದು ಮತ್ತು ಅಂಥ ರಾಜೀನಾಮೆ ಪತ್ರವನ್ನು ಸ್ವೀಕರಿಸಿದ ದಿನಾಂಕ ದಿಂದ ಹದಿನೈದು ದಿವಸಗಳು ಮುಕ್ತಾಯವಾದ ಮೇಲೆ ಅವನು ಸದರಿ ಹದಿನೈದು ದಿವಸಗಳ ಆ ಅವಧಿಯೊಳಗೆ ಆ ರಾಜೀನಾಮೆಯನ್ನು ತನ್ನ ಸಹಿ ಸಹಿತ ಅಧ್ಯಕ್ಷರಿಗೆ ಬರಹದಲ್ಲಿ ಬರೆದು ಹಿಂತೆಗೆದುಕೊಂಡಿದ್ದ ಹೊರತು, ಅವನ ಸ್ಥಾನವು ತೆರವಾಗತಕ್ಕದ್ದು, ಅಧ್ಯಕ್ಷನು ರಾಜೀನಾಮೆ ಪತ್ರವನ್ನು ಗ್ರಾಮ ಪಂಚಾಯಿತಿಯ ಮುಂದಿನ ಸಭೆಯಲ್ಲಿ ಮಂಡಿಸುವಂತೆ ಮಾಡತಕ್ಕದ್ದು."

ಮೇಲ್ಕಂಡ ಶಾಸನಬದ್ಧ ಕಾನೂನಿನ್ವಯ, ಗ್ರಾಮ ಪಂಚಾಯಿತಿಯ ಸದಸ್ಯರು ತಮ್ಮ ಸದಸ್ಯತ್ವದ ಸ್ಥಾನಕ್ಕೆ ರಾಜೀನಾಮೆಯನ್ನು ಬರಹದಲ್ಲಿ ಬರೆದು ಅಧ್ಯಕ್ಷರಿಗೆ ಸಲ್ಲಿಸಬಹುದು. ಅಂತಹ ರಾಜೀನಾಮೆಯನ್ನು ಸ್ವೀಕರಿಸಿದ 15 ದಿನಗಳ ನಂತರ ಸದಸ್ಯತ್ವದ ಸ್ಥಾನವು ತೆರವಾಗುತ್ತದೆ. ಒಂದು ಬಾರಿ ಸದಸ್ಯರು ಗ್ರಾಮ ಪಂಚಾಯಿತಿ ಅಧ್ಯಕ್ಷರಿಗೆ ತಮ್ಮ ರಾಜೀನಾಮೆ ಸಲ್ಲಿಸಿದ ನಂತರ ತಮ್ಮ ಅಧಿಕಾರವನ್ನು ಚಲಾಯಿಸುವಂತಿಲ್ಲ. ಹದಿನೈದು ದಿನಗಳ ಒಳಗೆ ರಾಜೀನಾಮೆ ಹಿಂಪಡೆಯದಿದ್ದರೆ ಸದರಿ ರಾಜೀನಾಮೆಯು ಅಂಗೀಕರಿಸಲಾಗಿದೆ ಎಂದು ಭಾವಿಸತಕ್ಕದ್ದು, ಮತ್ತು ಗ್ರಾಮ ಪಂಚಾಯತಿ ಸದಸ್ಯ ಸ್ಥಾನವು ತನ್ನಿಂದ ತಾನೆ ತೆರವಾಗುವುದು. ಗ್ರಾಮ ಪಂಚಾಯಿತಿ ಅಧ್ಯಕ್ಷರು ಸ್ವೀಕೃತವಾದ ಅಂಗೀಕರಿಸಲಾಗಿದೆ ಎಂದು ಭಾವಿಸಲಾಗಿರುವ ರಾಜೀನಾಮೆಯನ್ನು ಮುಂದಿನ ಗ್ರಾಮ ಪಂಚಾಯಿತಿ ಸಭೆಯಲ್ಲಿ ಮಂಡಿಸತಕ್ಕದ್ದು. ಸದಸ್ಯರ ರಾಜೀನಾಮೆಯನ್ನು ಅಂಗೀಕರಿಸದಿರುವ ನಿರ್ಣಯ ಕೈಗೊಳ್ಳಲು ಅವಕಾಶವಿರುವುದಿಲ್ಲ.

ಶ್ರೀ ಚಾಂದ್ ಪಾಷಾ, ಅಧ್ಯಕ್ಷರು, ಗೋಗಿಪೇಠ ಗ್ರಾಮ ಪಂಚಾಯಿತಿ, ಶಹಾಪೂರ ತಾಲ್ಲೂಕು, ಯಾದಗಿರಿ ಜಿಲ್ಲೆ, ಇವರು ಶ್ರೀಮತಿ ಭವಾನಿ ಗಂಡ ರಾಘವೇಂದ್ರ ಹಡಪದ, ಗ್ರಾಮ ಪಂಚಾಯಿತಿ ಸದಸ್ಯರು, ಗೋಗಿಪೇಠ, ಇವರ ರಾಜೀನಾಮೆಯನ್ನು ಅಂಗೀಕಾರ ಮಾಡಬಾರದೆಂದು ನಿರ್ಣಯ ಪಾಸು ಮಾಡಲು ಗ್ರಾಮ ಪಂಚಾಯಿತಿಗೆ ಅವಕಾಶ ಕಲ್ಪಿಸಿ ತಮ್ಮ ಕರ್ತವ್ಯ ಪಾಲನೆಯಲ್ಲಿ ದುರ್ನಡತೆ ಎಸಗುವ ಮೂಲಕ ಕರ್ನಾಟಕ ಪಂಚಾಯತ್ ರಾಜ್ ಕಾಯ್ದೆಯಡಿ ಶಿಸ್ತು ಕ್ರಮಕ್ಕೆ ಬಾಧ್ಯರಾಗಿರುತ್ತಾರೆಂದು ತಿಳಿಸುತ್ತಾ ಸದರಿಯವರ ವಿರುದ್ಧ ಕರ್ನಾಟಕ ಪಂಚಾಯತ್ ರಾಜ್ ಕಾಯ್ದೆಯಡಿ ಕ್ರಮ ಕೈಗೊಳ್ಳುವಂತೆ ಮಾನ್ಯ ಉಪಲೋಕಾಯುಕ್ತರು ಶಿಫಾರಸ್ಸು ಮಾಡಿರುತ್ತಾರೆ.

ಶ್ರೀ ಚಾಂದ್ ಪಾಷಾ, ಹಿಂದಿನ ಅಧ್ಯಕ್ಷರು, ಇವರು ಗೋಗಿಪೇಠ ಗ್ರಾಮ ಪಂಚಾಯಿತಿಗೆ ಮರು ಆಯ್ಕೆಗೊಂಡು ಪ್ರಸ್ತುತ ಗ್ರಾಮ ಪಂಚಾಯಿತಿಯ ಸದಸ್ಯರಾಗಿರುತ್ತಾರೆಂದು ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತ್, ಶಹಾಪೂರ ಇವರು ತಿಳಿಸಿರುತ್ತಾರೆ. ಸದರಿಯವರಿಗೆ ಕಾರಣ ಕೇಳುವ ನೋಟಿಸ್ಸನ್ನು ಜಾರಿಗೊಳಿಸಬಹುದಾಗಿದ್ದು, ಕರಡು ಕಾರಣ ಕೇಳುವ ನೋಟಿಸ್ಸನ್ನು ಅನುಮೋದನೆಗಾಗಿ ಸಲ್ಲಿಸಿದೆ.

ಸದರಿಯವರ ವಿರುದ್ಧ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಕಾಯ್ದೆ 1993 ಅಡಿ ಕ್ರಮ ವಹಿಸುವ ಪೂರ್ವದಲ್ಲಿ, ನಿಯಮಾನುಸಾರ ಕಾರಣ ಕೇಳುವ ನೋಟಿಸ್ಸನು ದಿನಾಂಕ:10.11.2016 ರಂದು ಸದರಿಯವರಿಗೆ ಜಾರಿಮಾಡಲಾಗಿದ್ದು, ಸದರಿಯವರು ಕಾರಣ ಕೇಳುವ ನೋಟಿಸ್ಸಿಗೆ ಉತ್ತರವನ್ನು ದಿನಾಂಕ: 06.02.2017 ರಂದು ಸರ್ಕಾರಕ್ಕೆ ಸಲ್ಲಿಸಿರುತ್ತಾರೆ, ಸದರಿಯವರು ತಮ್ಮ ಲಿಖಿತ ಹೇಳಿಕೆಯಲ್ಲಿ ಈ ಕೆಳಕಂಡಂತೆ ತಿಳಿಸಿರುತ್ತಾರೆ.

ಸದರಿಯವರು ಅನಕ್ಷರಸ್ಥರೆಂದು ಅವರಿಗೆ ಪಂಚಾಯತ್ ರಾಜ್ ಕಾಯ್ದೆಯ ಬಗ್ಗೆ ಸಂಪೂರ್ಣ ಮಾಹಿತಿ ಇರುವುದಿಲ್ಲವೆಂದು, ಶ್ರೀಮತಿ ಭವಾನಿ ಗಂಡ ರಾಘವೇಂದ್ರ ಹಡಪದ, ಗ್ರಾಮ ಪಂಚಾಯಿತಿಯ ಸದಸ್ಯರ ರಾಜೀನಾಮೆ ವಿಷಯವಾಗಿ ಅವರು ಮತ್ತು ಗ್ರಾಮ ಪಂಚಾಯಿತಿ ಕಾರ್ಯದರ್ಶಿಯಾದ ಶ್ರೀ ರಾಜಶೇಖರ ರವರು ಅಂದಿನ ಮಾನ್ಯ ತಹಶೀಲ್ದಾರರು ಶಹಪೂರ ರವರಿಗೆ ಸದರಿ ಸದಸ್ಯರ ರಾಜೀನಾಮೆ ವಿವರವನ್ನು ಸಲ್ಲಿಸುವಾಗ ಅಂದಿನ ಪ್ರಭಾರಿ ತಹಶೀಲ್ದಾರರಾದ ಶ್ರೀ ಘಂಟಿರವರು ಸದರಿ ರಾಜೀನಾಮೆಯನ್ನು ಗ್ರಾಮ ಪಂಚಾಯಿತಿಯಲ್ಲಿ ಅಂಗೀಕರಿಸುವಂತೆ ಮೌಖಿಕವಾಗಿ ಗ್ರಾಮ ಪಂಚಾಯಿತಿ ಕಾರ್ಯದರ್ಶಿರವರಿಗೆ ತಿಳಿಸಿದ್ದರೆಂದು ಅದರಂತೆ ರಾಜೀನಾಮೆ ವಿಷಯವನ್ನು ಗ್ರಾಮ ಪಂಚಾಯಿತಿ ಸಾಮಾನ್ಯ ಸಭೆಯಲ್ಲಿ ಚರ್ಚಿಸಲಾಗಿರುತ್ತದೆಂದು ಇದರಲ್ಲಿ ಗ್ರಾಮ ಪಂಚಾಯಿತಿಯ ಎಲ್ಲಾ ಸದಸ್ಯರ ಅಭಿಪ್ರಾಯವು ಒಳಗೊಂಡಿರುತ್ತದೆ

ವಿನಹ ತನ್ನ ವೈಯಕ್ತಿಕ ಯಾವುದೇ ಅಭಿಪ್ರಾಯ ಅಥವಾ ಇಚ್ಛಾಶಕ್ತಿ ಒಳಗೊಂಡಿರುವುದಿಲ್ಲವೆಂದು ತಿಳಿಸಿರುತ್ತಾರೆ.

ಈಗಾಗಲೇ ಶ್ರೀಮತಿ ಭವಾನಿ ಗಂಡ ರಾಘವೇಂದ್ರ ಹಡಪದ, ಗ್ರಾಮ ಪಂಚಾಯಿತಿ ಸದಸ್ಯರ ರಾಜೀನಾಮೆಯನ್ನು ಅಂಗೀಕರಿಸಿ ಮರು ಚುನಾವಣೆಯನ್ನು ಸಹ ಜರುಗಿಸಲಾಗಿದ್ದು, ಸದರಿ ಅವಧಿಯೂ ಸಹ ಮುಕ್ತಾಯವಾಗಿರುತ್ತದೆಂದು, ದುರುಪಯೋಗ ಪಡಿಸಿಕೊಂಡ ಸಂಪೂರ್ಣ ಹಣವನ್ನು ನಿಯಮಾನುಸಾರ ಗ್ರಾಮ ಪಂಚಾಯಿತಿ ಶಾಖೆಗೆ ಜಮಾ ಮಾಡಲಾಗಿರುತ್ತದೆಂದು ತಿಳಿಸಿರುತ್ತಾರೆ. ಇನ್ನು ಮುಂದೆ ಹಿರಿಯ ಅಧಿಕಾರಿಗಳ ಮಾರ್ಗದರ್ಶನದಂತೆ ಕೆಲಸ ನಿರ್ವಹಿಸುವುದಾಗಿ ಕೇಳಿಕೊಳ್ಳುತ್ತಾ ಸದರಿ ಪ್ರಕರಣವನ್ನು ಕೈಬಿಡುವಂತೆ ಕೋರಿರುತ್ತಾರೆ.

ಮಾನ್ಯ ಪ್ರಧಾನ ಕಾರ್ಯದರ್ಶಿಯವರ ನ್ಯಾಯಾಲಯದಲ್ಲಿ ದಿನಾಂಕ:21.03.2017 ರಂದು ಮಾನ್ಯ ಉಪಲೋಕಾಯುಕ್ತರು ಸಲ್ಲಿಸಿರುವ ವರದಿ ಹಾಗೂ ಸದರಿಯವರು ಸಲ್ಲಿಸಿರುವ ಲಿಖಿತ ಹೇಳಿಕೆಯನ್ನು ಪರಿಶೀಲಿಸಿ, ಆಪಾದಿತ ಅಧ್ಯಕ್ಷರು (ಮಾಜಿ), ಪ್ರಸ್ತುತ ಗ್ರಾಮ ಪಂಚಾಯಿತಿ ಸದಸ್ಯರಾಗಿದ್ದು, ಸದರಿ ಪ್ರಕರಣದಲ್ಲಿ ತಮಗೆ ತಿಳುವಳಿಕೆ ಇಲ್ಲದ ಕಾರಣ ಎಲ್ಲಾ ಸದಸ್ಯರ ಅಭಿಪ್ರಾಯದೊಂದಿಗೆ ಗ್ರಾಮ ಪಂಚಾಯಿತಿಯಲ್ಲಿ ನಿರ್ಣಯಿಸಿರುವುದಾಗಿ ಹಾಗೂ ಅದನ್ನು ನಿಯಮಾನುಸಾರ ತಾಲ್ಲೂಕು ಪಂಚಾಯಿತಿ ರದ್ದುಪಡಿಸಿರುವುದಾಗಿ, ಇದು ಹಿಂದಿನ ಅಧಿಕಾರದ ಅವಧಿಯಲ್ಲಿ ಆಗಿರುವುದಾಗಿದ್ದು, ತಾವು ಈಗ ಸದಸ್ಯರಾದ ಮೇಲೆ ಯಾವುದೇ ತಪ್ಪನ್ನು ಎಸಗಿರುವುದಿಲ್ಲವಾಗಿ ಹೇಳಿಕೆ ನೀಡಿರುತ್ತಾರೆ ಹಾಗೂ ವಿವರಣೆಯನ್ನು ಲಿಖಿತವಾಗಿಯೂ ಸಹ ನೀಡಿರುತ್ತಾರೆ. ಆದುದರಿಂದ ಈ ಸಾಲಿನಲ್ಲಿ ಸದರಿಯವರು ಸದಸ್ಯರಾದ ಮೇಲೆ ಯಾವುದೇ ದುರ್ನಡತೆ ಇಲ್ಲದಿರುವುದರಿಂದ ಸದಸ್ಯತ್ವವನ್ನು ರದ್ದು ಪಡಿಸಲಾಗುವುದಿಲ್ಲವೆಂದು ನಿರ್ಣಯಿಸಿದೆ. ಅದರಂತೆ ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/817/ಗ್ರಾಪಂಅ/2016**
**ಬೆಂಗಳೂರು, ದಿನಾಂಕ:–16–09–2017.**

ಪ್ರಸ್ತಾವನೆಯಲ್ಲಿ ವಿವರಿಸಲಾದ ಅಂಶಗಳ ಹಿನ್ನೆಲೆಯಲ್ಲಿ ಶ್ರೀ ಚಾಂದ್ ಪಾಷಾ, ಅಧ್ಯಕ್ಷರು (ಮಾಜಿ), ಹಾಲಿ ಸದಸ್ಯರು, ಗೋಗಿಪೇಠ ಗ್ರಾಮ ಪಂಚಾಯಿತಿ, ಶಹಾಪೂರ ತಾಲ್ಲೂಕು, ಯಾದಗಿರಿ ಜಿಲ್ಲೆ, ಇವರು ಈ ಸಾಲಿನಲ್ಲಿ ಗೋಗಿಪೇಠ ಗ್ರಾಮ ಪಂಚಾಯಿತಿಯ ಸದಸ್ಯರಾದ ಮೇಲೆ ಯಾವುದೇ ದುರ್ನಡತೆ ಇಲ್ಲದಿರುವುದರಿಂದ ಇವರನ್ನು ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಕಾಯ್ದೆ 1993 ರ ಪ್ರಕರಣ 43–ಎ ರನ್ವಯ ಗ್ರಾಮ ಪಂಚಾಯಿತಿಯ ಸದಸ್ಯತ್ವದಿಂದ ರದ್ದು ಪಡಿಸಲಾಗುವುದಿಲ್ಲವೆಂದು ಆದೇಶಿಸಿದೆ.

(ಸರ್ಕಾರದ ಪ್ರಧಾನ ಕಾರ್ಯದರ್ಶಿ (ಪಂ.ರಾಜ್)
ಗ್ರಾಅಪ ಇಲಾಖೆ ರವರಿಂದ ಅನುಮೋದಿತ)

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಟಿ.ವಿ. ಅರುಣ್‌ಕುಮಾರ್)
ಉಪನಿರ್ದೇಶಕರು ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

**ಪ್ರತಿಯನ್ನು:–**

1. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಯಾದಗಿರಿ ಜಿಲ್ಲೆ.
2. ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ, ಶಹಾಪೂರ ತಾಲ್ಲೂಕು, ಯಾದಗಿರಿ ಜಿಲ್ಲೆ.

3. ಶ್ರೀ ಚಾಂದ್ ಪಾಷಾ, ಅಧ್ಯಕ್ಷರು (ಮಾಜಿ), ಹಾಲಿ ಸದಸ್ಯರು, ಗೋಗಿಪೇಠ ಗ್ರಾಮ ಪಂಚಾಯಿತಿ, ಶಹಾಪೂರ ತಾಲ್ಲೂಕು, ಯಾದಗಿರಿ ಜಿಲ್ಲೆ.
4. ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಗೋಗಿಪೇಠ ಗ್ರಾಮ ಪಂಚಾಯಿತಿ, ಶಹಾಪೂರ ತಾಲ್ಲೂಕು, ಯಾದಗಿರಿ ಜಿಲ್ಲೆ.
5. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.
6. ವೆಬ್‌ಸೈಟ್, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.